
# ಮನುಷ್ಯನ ಆತ್ಮ

## ಐಶ್ವರ್ಯವಂತ ಮತ್ತು ಲಾಜರನು

ಭಾಗ – ೩

ಅಧ್ಯಯನ # 14



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 14

## ಐಶ್ವರ್ಯವಂತ ಮತ್ತು ಲಾಜರನು

### ಮಾನವನ ಆತ್ಮ ಭಾಗ-೩

<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*



ಈ ದಿನ ನಾವು ಮಾನವನ ಆತ್ಮದ ಮೂರನೇ ಭಾಗವನ್ನು ಅಭ್ಯಾಸ ಮಾಡಲಿದ್ದೇವೆ.

ಸತ್ಯವೇದದ ಮೂಲಕ ಕಳೆದ ಎರಡು ಅಭ್ಯಾಸಗಳಿಂದ ನಾವು **ಸ್ಪಷ್ಟವಾಗಿ** ತಿಳಿದುಕೊಂಡದ್ದೇನೆಂದರೆ ಮಾನವನ ಆತ್ಮವು **ಅಳಿದು ಹೋಗುತ್ತದೆ** ಮತ್ತು **ಅದು ಸಾಯುತ್ತದೆ** ಮತ್ತು ಮನುಷ್ಯರಾದ ನಮಗೆ ಆತ್ಮವಿರುವುದಿಲ್ಲ **ಆದರೆ ನಾವೇ ಆತ್ಮವಾಗಿದ್ದೇವೆ** ಮತ್ತು ನಾವು ಸಾಯುವಾಗ ನಮ್ಮ ಆತ್ಮ ಅಂದರೆ ನಾವೇ ಸಾಯುತ್ತೇವೆ.

**ಯೆಹೆಜ್ಕೇಲ 18:4**

**“ ....ಪಾಪ ಮಾಡುವ ಪ್ರಾಣಿಯೇ (ಆತ್ಮವೇ) ಸಾಯುವನು”**

ಮತ್ತೆ ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಕೀರ್ತನೆಗಳು 22:29**

**“ತಮ್ಮ ಜೀವವನ್ನು (ಆತ್ಮವನ್ನು ) ಉಳಿಸಿಕೊಳ್ಳಲಾರದೆ ಮಣ್ಣು ಪಾಲಾಗುವವರೆಲ್ಲರೂ ಆತನಿಗೆ ಅಡ್ಡ ಬೀಳುವರು...”**

ಎರಡನೇ ಭಾಗದಲ್ಲಿ ಸತ್ಯವೇದದ, ಪರಸ್ಪರ ವಿರೋಧವಾಗಿ ತೋರುವಂತ ಕೆಲವು ವಾಕ್ಯಗಳನ್ನು ನೋಡಿದೆವು ಮತ್ತು ಕೊನೆ0ುದಾಗಿ ಒಂದೇ ಒಂದು ವಾಕ್ಯದ ಅಭ್ಯಾಸ ಮಾತ್ರ ಉಳಿದಿದೆ.

ಹೌದು! **"ಐಶ್ವ0ರ್ುವಂತ ಮತ್ತು ಲಾಜರನು"**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಲೂಕ 16:19-31**

(ಪೂರ್ತಿ0ುಾಗಿ ಓದಿ)

ಸತ್ಯವೇದದ ಈ ವಾಕ್ಯಗಳನ್ನು ಎಲ್ಲಾ ಕಡೆಗಳಲ್ಲಿ ಹೆಸರಾಂತವಾಗಿ ಕ್ರೈಸ್ತರು **ಎರಡು ಬೋಧನೆಗಳನ್ನು ಸೂಚಿಸುವುದರ ಕುರಿತು** ಈ ದಿನ ಅಭ್ಯಾಸ ಮಾಡೋಣ.

**ಸಾ0ುದೆಯಿರುವಂತಹ** ಮತ್ತು ಮನುಷ್ಯನು ಸತ್ತ ನಂತರ **ನಾಶವಾಗದೆಯಿರುವ** ಆತ್ಮದ ಕುರಿತು ಬೊಧನೆ.

ದೇವರು ಉಂಟು ಮಾಡಿರುವ **ನಿತ್ಯ0ುಾತನೆ0ುು** ಸ್ಥಳವಾದ **ನರಕ**ವನ್ನು ಕುರಿತು ಬೋಧನೆ.

**ಸಾಮಾನ್ಯವಾಗಿ ಎಲ್ಲರೂ ಯೋಚಿಸುವುದೇನೆಂದರೆ ಐಶ್ವರ್ಯವಂತನು ನರಕಕ್ಕೆ ಹೋದನು**
**ಮತ್ತು ಭಿಕ್ಷುಕಗಾರನಾದ ಲಾಜರನು ಪರಲೋಕಕ್ಕೆ ಹೋದನು.**

ಆದರೆ 22ನೇ ವಾಕ್ಯವನ್ನು ಪರಿಶೋಧಿಸಿ ಓದುವಾಗ – ಆ ಭಿಕ್ಷುಕಗಾರನು ಸತ್ತು ದೇವದೂತರು ಅವನನ್ನು ತೆಗೆದುಕೊಂಡು ಹೋಗಿ, "ಅಬ್ರಹಾಮನ ಎದೆಗೆ" ಒರಗಿಸಿದರು ಎಂದು ನೋಡುತ್ತೇವೆ.

**"ಅಬ್ರಹಾಮನ ಎದೆ0ುು" ದೇವರು ವಾಸಿಸುವ ಪರಲೋಕವಾಗಲು ಸಾಧ್ಯವೇ?**

3

0ಯೇಸು ಹೇಳಿದ ಈ ವಾಕ್ಯಗಳನ್ನು ಅನೇಕರು **ನಿಜವಾಗಿ ನಡೆದ ಸಂಗತಿ0ಯೆಂದು** ಹೇಳುತ್ತಾರೆ ಮತ್ತು ಹಾಗೆ0ಯೇ ಅಂದುಕೊಂಡಿದ್ದಾರೆ!

ಆದರೆ **20,21,** ಮತ್ತು **24**ನೇ ವಾಕ್ಯಗಳನ್ನು ಅಭ್ಯಾಸ ಮಾಡುವಾಗ ಇದು ನೇರವಾದ ಭಾಷೆ0ಯೆಂದು ಹೇಳುವುದು ಬಹಳ ಅಸಮಂಜಸವಾಗಿದೆ.

ಇದು ಹೇಗೆಂದು ಕೆಳಗಿನ ವಾಕ್ಯದಲ್ಲಿ ಓದೋಣ –

**ಲೂಕ 16:20**

**"ಅವನ ಮನೇಬಾಗಿಲಲ್ಲಿ ಲಾಜರನೆಂಬ ಒಬ್ಬ ಭಿಕ್ಷಗಾರನು ಬಿದ್ದುಕೊಂಡಿದ್ದನು."**

ಐಶ್ವ0ರ್ಯವಂತನ ಮನೆ ಬಾಗಿಲಲ್ಲಿ ಈ ಭಿಕ್ಷುಕಗಾರನಾದ ಲಾಜರನು ಬಿದ್ದುಕೊಂಡಿದ್ದನು.

ಇದೊಂದು ಶಾಶ್ವತವಾದ ವ್ಯವಸ್ಥೆ0ಯಂತೆ ತೋರುತ್ತದೆ. ಇದಲ್ಲದೆ ಆ ಐಶ್ವ0ರ್ಯವಂತನು ತನ್ನ ಮೇಜಿನಿಂದ ಉಳಿದ ಆಹಾರವನ್ನು ಭಿಕ್ಷುಕಗಾರನಾದ ಲಾಜರನಿಗೆ ಕಳುಹಿಸುತ್ತಿದ್ದನು.

**ಊಹಿಸಿ ನೋಡಿರಿ!**



### ಯಾವ ಐಶ್ವರ್ಯವಂತನು ಈ ರೀತಿಯಾದ ವ್ಯವಸ್ಥೆಯನ್ನು ಮನೆ ಬಾಗಿಲಿನಲ್ಲಿ ಮಾಡುತ್ತಾನೆ?!

**ನೀವು ನಿಮ್ಮ ಮನೆ ಬಾಗಿಲ ಬಳಿ ಹೀಗೆ ಅನುಮತಿಸುವಿರಾ?**

ಆದರೂ ಈ ಐಶ್ವರ್ಯವಂತನು ಕೆಟ್ಟವನೆಂದು ನಂಬಲಾಗುತ್ತದೆ ಮತ್ತು ಸತ್ತು ನರಕಕ್ಕೆ ಹೋಗುತ್ತಾನೆ!

ಮತ್ತು ಮುಂದೆ ಹೀಗೆ ಓದುತ್ತೇವೆ......

### ಲೂಕ 16:21

**“ಇಷ್ಟು ಮಾತ್ರವಲ್ಲದೆ ನಾಯಿಗಳು ಸಹ ಬಂದು ಅವನ ಹುಣ್ಣುಗಳನ್ನು ನೆಕ್ಕುವವು.”**

ನಮ್ಮ ಸುತ್ತಲೂ ಭುಕ್ಷುಕರನ್ನೂ, ಕುಷ್ಟರೋಗಿಗಳನ್ನು ನೋಡುತ್ತೇವೆ ಕೆಲವರಿಗೆ ಕೈ ಕಾಲುಗಳಿಲ್ಲದೆ, ಗಾಯಗಳಿರುತ್ತದೆ. ಆದರೆ ಯಾವ ಭಿಕ್ಷುಕರಾಗಲಿ ಅಥವಾ ಕುಷ್ಟರೋಗಿಗಳಾಗಲಿ ನಾಯಿಗಳು ಅವರ ಹುಣ್ಣುಗಳನ್ನು ನೆಕ್ಕಲು ಬಿಡುವುದಿಲ್ಲ!

**ಇದು ದೊಡ್ಡ ಅವಮಾನವಾಗುವದು!**

ಆದ್ದರಿಂದ ಲಾಜರನ ಬಗ್ಗೆ ಹೇಳಿರುವ ವಿಷಯವು ನಿಜವಾಗಿ ನಡೆದಿರಲು ಸಾಧ್ಯವಿಲ್ಲ!!

ಈ ವಿಷಯದ ಅರ್ಥವೇನು? ಈ ಅಭ್ಯಾಸದ ನಂತರದ ಭಾಗದಲ್ಲಿ ನೋಡೋಣ.

ಆದರೆ ಅದಕ್ಕೆ ಮುಂಚಿತವಾಗಿ ಇನ್ನೊಂದು ವಾಕ್ಯವನ್ನು ನೋಡೋಣ –



## ಲೂಕ 16 : 24

“ತಂದೆಯೇ, ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು;
ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ;
ಈ ಉರಿಯಲ್ಲಿ ಸಂಕಟಪಡುತ್ತೇನೆ ಎಂದು ಕೂಗಿ ಹೇಳಿದನು”

**ಈ ದೃಶ್ಯವನ್ನು ಸ್ವಲ್ಪ ಊಹಿಸಿ ನೋಡಿರಿ !**




ಅದನ್ನು ನೆನಸಲೂ ಸಹ ಹಾಸ್ಯಾಸ್ಪದವಾಗಿದೆ!

ನಂತರ ನಿಜವಾಗಿ ಅಗ್ನಿ ಜ್ವಾಲೆಗಳ ಮಧ್ಯದಲ್ಲಿ ಈ ಐಶ್ವರ್ಯವಂತನ ಸ್ಥಿತಿಯನ್ನು ಮತ್ತು ಕೆಲವು **ಹನಿ** ನೀರಿನಿಂದ ಆತನ ನಾಲಿಗೆಗೆ ಉಪಶಮನ ಸಿಗುವುದೇ ಎಂದು ಊಹಿಸಿ ನೋಡಿರಿ!!!

**ಇದು ನೇರವಾದ ಭಾಷೆ0ಯಾಗಿರಲು ಸಾಧ್ಯವಿಲ್ಲ  ಈ ವಾಕ್ಯದ ಅರ್ಥ ಏನಾಗಿರಬಹುದು?**

ನಾವು ನೆನಪಿನಲ್ಲಿಡ ಬೇಕಾದ ವಿಷ0ಯವೇನೆಂದರೆ ನಮ್ಮ ಕರ್ತನಾದ 0ಯೇಸು 0ಯಾವಾಗಲೂ ಸಾಮ್ಯರೂಪವಾಗಿ ಮಾತನಾಡುತ್ತಿದ್ದರು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಮತ್ತಾಯ 13 : 34

**"ಯೇಸು ಈ ಮಾತುಗಳನ್ನೆಲ್ಲಾ ಜನರ ಗುಂಪುಗಳಿಗೆ ಸಾಮ್ಯರೂಪವಾಗಿ ಹೇಳಿದನು;  ಸಾಮ್ಯವಿಲ್ಲದೆ ಒಂದನ್ನೂ ಹೇಳಲಿಲ್ಲ."**

ಹೌದು! ಈ ವಾಕ್ಯದ ಮೊದಲ ಭಾಗವನ್ನು ಗಮನಿಸಿ

**ಲೂಕ 15 :11** → **"......ಒಬ್ಬಾನೊಬ್ಬ ಮನುಷ್ಯನಿಗೆ....."**

**ಲೂಕ 16 : 1** → **".....ಐಶ್ವರ್ಯವಂತನಾದ ಒಬ್ಬ ಮನುಷ್ಯನಿಗೆ....."**

**ಲೂಕ 19 : 12** → **".....ಶ್ರೀಮಂತನಾದ ಒಬ್ಬಾನೊಬ್ಬ ಮನುಷ್ಯನು....."**

**ಲೂಕ 20 : 9** → **".....ಒಬ್ಬ ಮನುಷ್ಯನು ಒಂದು ದ್ರಾಕ್ಷೆಯ ತೋಟವನ್ನು ಮಾಡಿ....."**

**ಇಲ್ಲಿ ನಾವು ಏನು ನೋಡುತ್ತೇವೆ?**

ಹೌದು! **ಆರಂಭದಲ್ಲಿ ಅದೇ ಭಾಷೆ** ಉಪ0ಯೋಗಿಸಿರುವದನ್ನು ನೋಡುತ್ತೇವೆ!

ಆದ್ದರಿಂದ ಇದು 0ಯೇಸು ಹೇಳಿದ **ಸಾಮ್ಯರೂಪವೆಂದು** ನಮಗೆ ಮನವರಿಕೆ0ಯಾಗುತ್ತದೆ!

ಮತ್ತು ಕೆಲವರು ಮಾತ್ರ ಇದು ಸಾಮ್ಯರೂಪವೆಂದು ಅರಿತುಕೊಳ್ಳುತ್ತಾರೆ!

**ಇದನ್ನು ಯೇಸು ಹೇಳಿದ "ರಹಸ್ಯ"ವಾದ ಸಾಮ್ಯರೂಪವೆಂದು ಕರೆಯಲಾಗುತ್ತದೆ!**

ಈಗ ಈ ಸಾಮ್ಯರೂಪದ ಅರ್ಥವೇನಿರಬಹುದೆಂದು ಅಭ್ಯಾಸ ಮಾಡೋಣ–

"ಐಶ್ವರ್ಯವಂತ" ಮತ್ತು "ಲಾಜರನು" ಎರಡು ವರ್ಗಗಳೆಂದು ಯೇಸು ಸೂಚಿಸುತ್ತಾನೆ!

ಕೆಳಗಿನ ವಾಕ್ಯವನ್ನು ಓದೋಣ –

**ಲೂಕ 16:19**

**" ಐಶ್ವರ್ಯವಂತನಾದ ಒಬ್ಬ ಮನುಷ್ಯನಿದ್ದನು. ಅವನು ಸಕಲಾತಿ ನಯವಾದ ನಾರುಮಡಿ ಮುಂತಾದ ವಸ್ತ್ರಗಳನ್ನು ಧರಿಸಿಕೊಂಡು ಪ್ರತಿದಿನವೂ ವೈಭವದೊಡನೆ ಸುಖ ಸಂತೋಷಪಡುತ್ತಿದ್ದನು."**



ಕರ್ತನಾದ ಯೇಸು ಅನೇಕ ಸಾಮ್ಯಗಳಲ್ಲಿ ಹೇಳಿರುವಂತೆ ಇದು ಸಹ ಎರಡು ವರ್ಗಗಳನ್ನು ಸೂಚಿಸುತ್ತದೆ.

ಉದಾಹರಣೆಗೆ: **ಲೂಕ** 15 : 11 (ಇಬ್ಬರು ಮಕ್ಕಳ **ಸಾಮ್ಯ** ಅಥವಾ ಕೆಟ್ಟುಹೋದ ಮಗನ ಸಾಮ್ಯ )

ಅದೇ ರೀತಿ ಇಲ್ಲಿ "ಐಶ್ವರ್ಯವಂತ" ನನ್ನು ಒಂದು ವರ್ಗವಾಗಿ ಸೂಚಿಸಲಾಗಿದೆ!

## ಇದು ಯಾರಿರಬಹುದು?



## ಯೇಸು ಇಸ್ರಾಯೇಲ್ ದೇಶವನ್ನು "ಮಾತಿನ ಚಿತ್ರದಿಂದ" ಬಣ್ಣಿಸುತ್ತಿದ್ದಾನೆ.

ೞೇಸು ಮಾತಿನ ಚಿತ್ರದಲ್ಲಿ ಹೇಗೆ "ಬಣ್ಣಿಸುತ್ತಾನೆಂದು" ಈಗ ಅಭ್ಯಾಸ ಮಾಡೋಣ!

### "ಸಕಲಾತಿ ನಯವಾದ ... ವಸ್ತ್ರ" (ನೇರಳೆ ಬಣ್ಣ)



ಇಲ್ಲಿ "ನೇರಳೆ ಬಣ್ಣ" ವು ರಾಜರು ಧರಿಸಿಕೊಳ್ಳುವ ವಸ್ತ್ರವಾಗಿದ್ದು ಅದು ದೊರೆತನವನ್ನು ಸೂಚಿಸುತ್ತದೆ. ಇದನ್ನು **ೞೋಹಾನ 19 : 2,3**ರಲ್ಲಿ ಖಚಿತ ಪಡಿಸಲಾಗಿದೆ. ಹೇಗೆಂದರೆ ೞೇಸುವಿಗೆ ಈ ನೇರಳೆ ಬಣ್ಣದ ವಸ್ತ್ರವನ್ನು ಹೊದಿಸಿ "ೞೆಹೂದ್ಯರ ಅರಸ" ನೆಂದು ಹಾಸ್ಯ ಮಾಡುತ್ತಾರೆ.

ಆದರೆ ಈ ಸಂಕೇತವು ಇಸ್ರಾೞೇಲ್ ದೇಶಕ್ಕೆ ಸಂಬಂಧಿಸಿದಂತೆ ಅದು ಅವರುಗಳನ್ನು ಮುಚ್ಚಿರುವ ಅಥವ ಅವರಿಗೆ ಹೊದಿಸಲ್ಪಟ್ಟಿರುವ ಹೊದಿಕೆಯಾದ "ರಾಜರೀಕ ವಾಗ್ದಾನ" ಗಳನ್ನು ಸೂಚಿಸುತ್ತದೆ.

## ವಿಮೋಚನಕಾಂಡ 19:5, 6

"ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯಜನರಾಗುವಿರಿ; ಸಮಸ್ತ ಭೂಮಿಯೂ ನನ್ನದಷ್ಟೆ.
ನೀವು ನನಗೆ ಯಾಜಕರಾಜ್ಯವೂ ಪರಿಶುದ್ಧಜನವೂ ಆಗಿರುವಿರಿ.
ಇವೇ ನೀನು ಇಸ್ರಾಯೇಲ್ಯರಿಗೆ ಹೇಳಬೇಕಾದ ಮಾತುಗಳು ಎಂದನು"

ಹೌದು! "ನೇರಳೆ ಬಣ್ಣವು" ಇಸ್ರಾಯೇಲ್ಯರಿಗೆ ಹೊದಿಸಿರುವ ದೇವರ ರಾಜ್ಯದ ವಾಗ್ದಾನಗಳನ್ನು ದೇವರ ರಾಜರೀಕ ವಾಗ್ದಾನಗಳನ್ನು ಸೂಚಿಸುತ್ತದೆ. ಆದ್ದರಿಂದ ಅವರನ್ನು....."ಸಕಲಾತಿಗಳಲ್ಲಿ ನಯವಾದ... ವಸ್ತ್ರ" (ನೇರಳೆ ಬಣ್ಣವನ್ನು) ಧರಿಸಿದವರೆಂದು ಹೇಳಲಾಗಿದೆ.

### "ನಾರುಮಡಿ"

ಈ ನಾರುಮಡಿ0ಯು ಜನರ ಸತ್ಕಾ0ರ್ಯಗಳೆಂದು **ಪ್ರಕಟನೆ 19:8** ರಲ್ಲಿ ಓದುತ್ತೇವೆ.

ಅವರ ನೀತಿ ಅಥವಾ ಸತ್ಕಾ0ರ್ಯಗಳು ಅಕ್ಷರಶಃವಾದದ್ದಲ್ಲ.....ಆದರೆ ಅವರ **ವರ್ಷಕ್ಕೊಮ್ಮೆ ಮಾಡುವ ದೋಷ ಪರಿಹಾರಕ ದಿನದ ಯಜ್ಞದ ಮೂಲಕ ಪಡೆದುಕೊಂಡು ನೀತಿಯಾಗಿದೆ.**

## ಯಾಜಕಕಾಂಡ 16:29-31

"ಇದು ನಿಮಗೆ ಶಾಶ್ವತವಾದ ನಿಯಮ; ಯಾವದಂದರೆ ಸ್ವದೇಶಸ್ಥರಾದ ನೀವೂ ನಿಮ್ಮಲ್ಲಿ ಇಳುಕೊಂಡಿರುವ ಅನ್ಯದೇಶದವರೂ ಎಲ್ಲರೂ ಏಳನೆಯ ತಿಂಗಳಿನ ಹತ್ತನೆಯ ದಿನದಲ್ಲಿ ಸಕಲ ವಿಧವಾದ ಕೆಲಸಗಳನ್ನೂ ಬಿಟ್ಟು [ಉಪವಾಸಮಾಡಿ] ಪ್ರಾಣವನ್ನು ಕುಂದಿಸಿಕೊಳ್ಳಬೇಕು. ಯಾಕಂದರೆ ನೀವು ಪರಿಶುದ್ಧರಾಗುವದಕ್ಕಾಗಿ ಈ ದಿನದಲ್ಲಿ ನಿಮಗೋಸ್ಕರ ದೋಷಪರಿಹಾರವಾಗುವದು,



**ಯೆಹೋವನ ದೃಷ್ಟಿಯಲ್ಲಿ ನಿಮ್ಮ ಎಲ್ಲಾ ದೋಷಗಳು ನಿವಾರಣೆಯಾಗುವವು. ಇದು ನಿಮಗೆ ಸಂಪೂರ್ಣವಾಗಿ ಕೆಲಸವನ್ನು ನಿಲ್ಲಿಸಬೇಕಾದ ಸಬ್ಬತ್ ದಿನವಾಗಿರಬೇಕು; ಇದರಲ್ಲಿ ನೀವು ಉಪವಾಸವಾಗಿರಬೇಕು; ಇದೇ ನಿಮಗೆ ಶಾಶ್ವತ ನಿಯಮ"**

ಅವರು ದೇವರ ಮುಂದೆ **ಸಾಂಕೇತಿಕವಾಗಿ** ಮತ್ತು ತಾತ್ಕಾಲಿಕವಾಗಿ ನೀತಿವಂತರೆಂಬ ನಿರ್ಣಯ ಹೊಂದಿ ಆ ಮೂಲಕ ಆತನ ಬಳಿಗೆ ಬರಲು ಹಾಗೂ ಪ್ರಾರ್ಥಿಸಲು ಸಾಧ್ಯವಾಯಿತು.

ಹೌದು! ಇಸ್ರಾಯೇಲ್ಯರು "ನಾರುಮಡಿ ವಸ್ತ್ರ"ಗಳನ್ನು ಧರಿಸಿಕೊಂಡಿದ್ದರು.

**ಹೌದು! ಅವರ ಪಾಪಗಳು ಮುಚ್ಚಲ್ಪಟ್ಟಿದ್ದವು ಮತ್ತು ದೇವರ ಮುಂದೆ ಅವರು (ನೀತಿ) ವಸ್ತ್ರಗಳನ್ನು ಧರಿಸಿಕೊಂಡಿದ್ದರು**

**"ಪ್ರತಿದಿನವೂ ವೈಭವದೊಡನೆ (ತಿನ್ನುತ್ತಾ) ಸುಖ ಸಂತೋಷಪಡುತ್ತಿದ್ದನು"**

ನಾವು ದೇವರ ವಾಕ್ಯಗಳನ್ನು ಆಹಾರವಾಗಿ "ತಿನ್ನುವುದನ್ನು" ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಯೆರೆಮೀಯ 15:16**

**" ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು, ನಿನ್ನ ನುಡಿಗಳು ನನಗೆ ಹರ್ಷವೂ ಹೃದಯಾನಂದವೂ ಆದವು; ಸೇನಾಧೀಶ್ವರನಾದ ದೇವರೇ, ಯೆಹೋವನೇ ನಾನು ನಿನ್ನ ಹೆಸರಿನವನಲ್ಲವೆ!"**



**ಇಸ್ರಾಯೇಲಿಗೆ ದೊರೆತಿರುವಂತಹ ಅಷ್ಟೊಂದು ದೇವರ ವಾಕ್ಯ ಮತ್ತು ಆಶೀರ್ವಾದಗಳು ಬೇರೆ ಯಾವ ದೇಶಕ್ಕೆ ಸಿಕ್ಕಿದೆ ?**

ಹೌದು! ಇದನ್ನು ಕುರಿತು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ -

**ಧರ್ಮೋಪದೇಶಕಾಂಡ 4:6-8, 33**

**"ಇವುಗಳನ್ನು ಕೈಕೊಂಡು ಅನುಸರಿಸಿರಿ. ಅನುಸರಿಸಿದರೇ ಅನ್ಯಜನಗಳು ನಿಮ್ಮನ್ನು ಜ್ಞಾನಿಗಳೂ ವಿವೇಕಿಗಳೂ ಎಂದು ತಿಳಿಯುವರು. ಅವರು ಈ ಆಜ್ಞೆಗಳ ವಿಷಯದಲ್ಲಿ ವರ್ತಮಾನವನ್ನು ಕೇಳಿ - ಈ ದೊಡ್ಡ ಜನಾಂಗವು ಜ್ಞಾನ ವಿವೇಕವುಳ್ಳ ಜನಾಂಗ ಎಂದು ಮಾತಾಡಿಕೊಳ್ಳುವರು. ನಾವು ನಮ್ಮ ದೇವರಾದ ಯೆಹೋವನಿಗೆ ಮೊರೆಯಿಡುವಾಗೆಲ್ಲಾ ಆತನು ಸಮಿಪವಾಗಿಯೇ ಇದ್ದಾನಲ್ಲಾ; ಬೇರೆ ಎಷ್ಟು ದೊಡ್ಡ ಜನಾಂಗಕ್ಕಾದರೂ ಯಾವ ದೇವರು ಹೀಗೆ ಸಮೀಪವಾಗಿರುವನು? ನಾನು ಈ ಹೊತ್ತು ನಿಮ್ಮ ಮುಂದೆ ಇಡುವ ಇಂಥ ನ್ಯಾಯವಾದ ಆಜ್ಞಾವಿಧಿಗಳುಳ್ಳ ಈ ಧರ್ಮಶಾಸ್ತ್ರಕ್ಕೆ ಸಮಾನವಾದದ್ದು ಬೇರೆ ಯಾವ ಜನಾಂಗಕ್ಕೆ ಉಂಟು?**

**ದೇವರು ಬೆಂಕಿಯ ಜ್ವಾಲೆಯೊಳಗಿಂದ ಮಾತಾಡಿದ ಸ್ವರವು ನಿಮಗೆ ಕೇಳಿಸಿತಲ್ಲಾ; ಬೇರೆ ಯಾವ ಜನರಾದರೂ ದೇವರ ಸ್ವರವನ್ನು ಕೇಳಿ ಬದುಕಿದ್ದುಂಟೋ? "**

ಹೌದು! ಆದ್ದರಿಂದ ನಾವು ನೋಡುವುದೇನೆಂದರೆ "ಐಶ್ವರ್ಯವಂತನು" ದೇವರ ವಾಕ್ಯವನ್ನು ಬಹಳವಾಗಿ ಪಡೆದುಕೊಂಡಿದ್ದ **ಇಸ್ರಾಯೇಲ್** ದೇಶವನ್ನು ಸೂಚಿಸುತ್ತಾನೆ.

ಇದಲ್ಲದೆ **ಇಡೀ ಹಳೆಯ ಒಡಂಬಡಿಕೆ** ಮತ್ತು ಎಲ್ಲಾ ಪ್ರವಾದನೆ ವಾಕ್ಯಗಳು ಅವರಿಗಾಗಿ ಮಾತ್ರ ಪ್ರಕಟವಾಯಿತು!!

ಇಡೀ ಯೆಹೂದ್ಯ ಯುಗದ ಎಲ್ಲಾ ಪ್ರವಾದಿಗಳು ಯೆಶಾಯ ಮೊದಲುಗೊಂಡು ಮಲಾಕಿಯವರೆಗೂ ಎಲ್ಲರೂ ಇಸ್ರಾಯೇಲ್ ಜನರೊಂದಿಗೆ ಮಾತ್ರ ಮಾತನಾಡಲು ಕಳುಹಿಸಲ್ಪಟ್ಟರು.

ಇದಲ್ಲದೆ ಅವರು **"ಪ್ರತಿದಿನವೂ ವೈಭವದೊಡನೆ"** (ದೇವರ ವಾಕ್ಯಗಳನ್ನು ತಿನ್ನುತ್ತಾ) ಸುಖ ಸಂತೋಷ ಪಡುತ್ತಿದ್ದರು (ಇಡೀ ಯೆಹೂದ್ಯ ಯುಗದಲ್ಲಿ). ನಾವು ಈಗ **ಇಸ್ರಾಯೇಲಿನ ಆತ್ಮೀಕ ಐಶ್ವರ್ಯಗಳನ್ನು** ಕೆಳಗಿನ ವಾಕ್ಯದಲ್ಲಿ ನೋಡೋಣ –

**ಅಮೋಸ 3:2**

**" ಭೂಮಿಯ ಸಕಲಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ; ಆದಕಾರಣ ನಿಮ್ಮ ಎಲ್ಲಾ ಪಾಪಗಳ ಫಲವನ್ನು ನಿಮಗೆ ತಿನ್ನಿಸುವೆನು "**

ಹೌದು! ಅವರು ದೇವರಿಂದ **ಆರಿಸಲ್ಪಟ್ಟ ದೇಶದವರು**. ಸ್ವಲ್ಪ ಯೋಚಿಸಿ ನೋಡಿರಿ!

ಇಡೀ ಇಸ್ರಾಯೇಲಿನ ಬಗ್ಗೆ ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ರೋಮಾಪುರದವರಿಗೆ 3:1**

**"ಹಾಗಾದರೆ ಯೆಹೂದ್ಯರ ಶ್ರೇಷ್ಠತ್ವವೇನು? ಸುನ್ನತಿಯಿಂದ ಲಾಭವೇನು?"**



**ಹೌದು! ಯೆಹೂದ್ಯರ ಆಶೀರ್ವಾದಗಳೇನು?** ಅಥವಾ

**ಯೆಹೂದ್ಯರ 'ಐಶ್ವರ್ಯ'ಗಳೇನು?** ಅಥವಾ

**ಯೆಹೂದ್ಯರ ಐಶ್ವರ್ಯಗಳ ಆಯವ್ಯಯದ ಪಟ್ಟಿಯೇನು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ........

**ರೋಮಾಪುರದವರಿಗೆ 9:4,5**

**"ಅವರು ಇಸ್ರಾಯೇಲನ ವಂಶದವರೂ ದೇವರು ಪುತ್ರರಾಗಿ ಸ್ವೀಕರಿಸಿದವರೂ ಆಗಿದ್ದಾರೆ. ಅವರಲ್ಲಿ ದೇವರ ತೇಜಸ್ಸಾನ್ನಿಧ್ಯವು ಇದೆ; ಅವರ ಸಂಗಡ ದೇವರು ಒಡಂಬಡಿಕೆಗಳನ್ನು ಮಾಡಿಕೊಂಡನು; ಅವರಿಗೆ ಧರ್ಮಶಾಸ್ತ್ರವೂ ದೇವಾಲಯದಲ್ಲಿ ನಡೆಯುವ ಆರಾಧನೆಯೂ ವಾಗ್ದಾನಗಳೂ ಕೊಡೋಣವಾದವು. ಅಬ್ರಹಾಮ ಇಸಾಕ ಯಾಕೋಬರು ಅವರ ಪಿತೃಗಳೇ. ಕ್ರಿಸ್ತನು ಶರೀರಸಂಬಂಧವಾಗಿ ಅವರ ವಂಶದಲ್ಲಿಯೇ ಹುಟ್ಟಿದವನು, ಆತನು ಎಲ್ಲಾದರ ಮೇಲೆ ಒಡೆಯನೂ ನಿರಂತರ ಸ್ತುತಿ ಹೊಂದತಕ್ಕ ದೇವರೂ ಆಗಿದ್ದಾನೆ. ಆಮೆನ್."**

ಹೌದು! ನಿಜವಾಗಿಯೂ ಇದು ದೇವರಿಂದ ಪಡೆದ **ಆಶೀರ್ವಾದಗಳ** ಮತ್ತು **ಐಶ್ವರ್ಯಗಳ** ಚಿತ್ರವಾಗಿದೆ.

ಇಸ್ರಾಯೇಲಿನ ಆತ್ಮೀಕ ಆಶೀರ್ವಾದಗಳ ಪೂರ್ಣ ಪಟ್ಟಿಯಾಗಿದೆ.

**ನಿಜವಾಗಿಯೂ ಅಧಿಕವಾದ ಐಶ್ವರ್ಯಗಳಾಗಿವೆ!**

ಹೌದು! ನಿಜವಾಗಿಯೂ, ಇಲ್ಲಿ ಇಸ್ರಾಯೇಲನ್ನು "ಐಶ್ವರ್ಯವಂತ" ಎಂಬುದಾಗಿ ಚಿತ್ರಿಸಲಾಗಿದೆ!

**ಆದ್ದರಿಂದ ಇಸ್ರಾಯೇಲ್ ದೇಶದ ಬಗ್ಗೆ ಯೇಸು ಮಾತಿನ ಚಿತ್ರ ಚಿತ್ರಿಸಿರುವುದನ್ನು ನೋಡುತ್ತೇವೆ.**

**ಈ 'ಭಿಕ್ಷುಕಗಾರನ' ಬಗ್ಗೆ ಏನು?**

**ಆತನನ್ನು ಯಾವುದಕ್ಕೆ ಅಥವಾ ಯಾರಿಗೆ ಸೂಚಿಸಲಾಗಿದೆ?**

ಕೆಳಗಿನ ವಾಕ್ಯವನ್ನು ಓದಿ ನೋಡೋಣ –

## ಲೂಕ 16:20,21


**“ ಅವನ ಮನೇ ಬಾಗಿಲಲ್ಲಿ ಲಾಜರನೆಂಬ ಒಬ್ಬ ಭಿಕ್ಷಗಾರನು ಬಿದ್ದುಕೊಂಡಿದ್ದನು. ಇವನು ಮೈತುಂಬಾ ಹುಣ್ಣಿದ್ದವನು; ಐಶ್ವರ್ಯವಂತನ ಮೇಜಿನಿಂದ ಬಿದ್ದ ಎಂಜಲನ್ನು ತಿಂದು ಹಸಿವು ತೀರಿಸಿಕೊಳ್ಳಬೇಕೆಂದಿದ್ದನು; ಇಷ್ಟು ಮಾತ್ರವಲ್ಲದೆ ನಾಯಿಗಳು ಸಹ ಬಂದು ಅವನ ಹುಣ್ಣುಗಳನ್ನು ನೆಕ್ಕುವವು.”**

**ಇಲ್ಲಿ "ಭಿಕ್ಷಗಾರ"ನಾದ "ಲಾಜರ"ನನ್ನು ಯೆಹೂದ್ಯರಲ್ಲದವರಿಗೆ ಸೂಚಿಸಲಾಗಿದೆ!**

**ಯಾರಾದರು ಅದು ಹೇಗೆಂದು ಕೇಳಬಹುದು?**

ಉಪಯೋಗಿಸಿರುವ ಸಂಕೇತಗಳ ಮೂಲಕ ಉತ್ತರವನ್ನು ನೋಡೋಣ –

### “ಭಿಕ್ಷಗಾರ”



ಯೆಹೂದ್ಯರಲ್ಲದವರು ದೇವರ ಆಶೀರ್ವಾದಗಳಲ್ಲಿ ಬಹಳ ಬಡವರಾಗಿದ್ದರು – ಹೇಳಬೇಕೆಂದರೆ ಅವರಿಗೆ ಆಶೀರ್ವಾದಗಳೇ ಇರಲಿಲ್ಲ! – ಸಂಪೂರ್ಣ ದರಿದ್ರರು!!

### “ಮೈತುಂಬಾ ಹುಣ್ಣಿದ್ದವನು”

ಇದು ಯೆಹೂದ್ಯರಲ್ಲದವರ ಪಾಪದ ಸ್ಥಿತಿಯನ್ನು ಸೂಚಿಸುತ್ತದೆ ಮತ್ತು ಅವರ ಪಾಪಗಳನ್ನು ಶುದ್ಧೀಕರಿಸಲು ಮತ್ತು ದೋಷಪರಿಹಾರ ಮಾಡಲು ಯಾವ ದಾರಿಯೂ ಇರಲಿಲ್ಲ.

ಈ ಹುಣ್ಣು (ಗಾಯ) ಅವರು ಪಾಪಕ್ಷಮಾಪಣೆಯಿಲ್ಲದ ಸ್ಥಿತಿಯಲ್ಲಿರುವುದನ್ನು ಸೂಚಿಸುತ್ತದೆ.

## "ಬಾಗಿಲ ಬಳಿ"

ಇದು ದೇವರ "ದಯೆ ಇಲ್ಲ"ದಿರುವುದನ್ನು ಸೂಚಿಸುತ್ತದೆ ಏಕೆಂದರೆ "ಮನೆ" ಎಂಬುದು ಇಸ್ರಾಯೇಲ್ ದೇಶದ ಆಶೀರ್ವಾದ ಮತ್ತು ದಯೆ ಹೊಂದಿರುವ ಸ್ಥಿತಿಯನ್ನು ಸೂಚಿಸುತ್ತದೆ.



ಐಶ್ವರ್ಯವಂತನ "ಗೋಡೆ" ಎಂಬುದು ಧರ್ಮಶಾಸ್ತ್ರದ ಒಡಂಬಡಿಕೆಯನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಎಫೆಸದವರಿಗೆ 2:14**

**"ನಿಮ್ಮನ್ನೂ ನಮ್ಮನ್ನೂ ಒಂದುಮಾಡಿದವನಾದ ಆತನೇ ನಮಗೆ ಸಮಾಧಾನಕರ್ತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನ ತೆಗೆದುಹಾಕಿ ಇದ್ದ ದ್ವೇಷವನ್ನು ಮುರಿಸಿ ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿಹಾಕಿದನು."**

ಮತ್ತು "ಬಾಗಿಲು" ಎಂಬುದು ಸುನ್ನತಿಯ ಒಡಂಬಡಿಕೆಯನ್ನು ಸೂಚಿಸುತ್ತದೆ (**ಆದಿಕಾಂಡ** 17:12:14)

ಯೆಹೂದ್ಯರು ಈ ಬಾಗಿಲ ಮೂಲಕ ಒಳಗೆ ಪ್ರವೇಶಿಸುತ್ತಿದ್ದರು.

ಯೆಹೂದ್ಯರಲ್ಲದವರು ಈ "ಗೋಡೆ" ಮತ್ತು "ಬಾಗಿಲ" ಹೊರಗೆ ಇರುತ್ತಿದ್ದರು.

## "ಎಂಜಲು" (ತುಂಡು)

ಇದು ಯೆಹೂದ್ಯರಲ್ಲದವರು "ಕೆಲವು" ದೈವೀಕ ಆಶೀರ್ವಾದಗಳನ್ನು ಹುಡುಕುವುದನ್ನು ಮತ್ತು ಬಿಕ್ಷೆಬೇಡುವುದನ್ನು ಸೂಚಿಸುತ್ತದೆ.

ಈ ಸಂಗತಿಯನ್ನು ಯೇಸು ಮತ್ತು ಕಾನಾನ್ಯಳಾದ ಸ್ತ್ರಿಯು ನಡುವೆ ನಡೆಯುವ ಸಂಭಾಷಣೆಯಲ್ಲಿ ಕಾಣಬಹುದು (ಮತ್ತಾಯ 15:25 – 28 ನ್ನು ಓದಿ)



## "ನಾಯಿಗಳು ಸಹ ಬಂದು ಅವನ ಹುಣ್ಣುಗಳನ್ನು ನೆಕ್ಕುವವು"

ನಾವು ಮೊದಲೇ ನೋಡಿದ ಹಾಗೆ "ಹುಣ್ಣು" ಎಂಬುದು ಪಾಪಕ್ಷಮಾಪಣೆಯಿಲ್ಲದ ಸ್ಥಿತಿಯನ್ನು ಸೂಚಿಸುತ್ತದೆ.

ಈಗ "ನೆಕ್ಕುವವು" ಎಂಬುದು ಸ್ವಲ್ಪ ನೆಮ್ಮದಿ ಮತ್ತು ಉಪಶಮನವನ್ನು ಸೂಚಿಸುತ್ತದೆ.

ಅನ್ಯರು ತಮ್ಮ ಪಾಪಗಳ ಪರಿಹಾರಕ್ಕಾಗಿ ಯಾವ ರೀತಿಯ ಉಪಶಮನವನ್ನು ಹುಡುಕುತ್ತಿದ್ದರೆಂದು ಇದು ಸೂಚಿಸುತ್ತದೆ.

**ಈಗ ನಾಯಿಗಳು ಏನನ್ನು ಸೂಚಿಸುತ್ತದೆ?**



**ಯಾಜಕಕಾಂಡ 11:27** ರಲ್ಲಿ ನಾಯಿಯು ಒಂದು ಅಶುದ್ಧಪ್ರಾಣಿ.

ಆದ್ದರಿಂದ "ನಾಯಿಗಳು ಹುಣ್ಣುಗಳನ್ನು ನೆಕ್ಕುವವು" ಎಂಬುದು ಪಾಪ ಪರಿಹಾರಕ್ಕಾಗಿ ಯೆಹೂದ್ಯರಲ್ಲದವರು ಹುಡುಕುತ್ತಿದ್ದ ಮಾರ್ಗಗಳನ್ನು ಚಿತ್ರಿಸುತ್ತದೆ.

ಉದಾಹರಣೆಗೆ: ವಿಗ್ರಹ ಆರಾಧನೆ, ಕುರುಡು ನಂಬಿಕೆಗಳು, ಚಿಕ್ಕ ಮಕ್ಕಳನ್ನು ಬಲಿಕೊಡುವುದು ಇತರೆ.

**ಹೌದು! ಅನ್ಯಜನಾಂಗದವರು ಇಂತಹ ಸ್ಥಿತಿಯಲ್ಲಿದ್ದರು!!**

ನಂತರ ನಾವು ಏನು ಓದುತ್ತೇವೆ –

**ಲೂಕ 16:22**

**" ಹೀಗಿರುವಲ್ಲಿ ಸ್ವಲ್ಪ ಕಾಲದ ಮೇಲೆ ಆ ಭಿಕ್ಷಗಾರನು ಸತ್ತನು ದೇವದೂತರು ಅವನನ್ನು ತೆಗೆದುಕೊಂಡುಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಆ ಐಶ್ವರ್ಯವಂತನು ಸಹ ಸತ್ತನು;"**

ಹೌದು!! ಇಲ್ಲಿ "ಸತ್ತನು" ಎಂಬುದು ಮುಕ್ತಾಯವನ್ನು ಸೂಚಿಸುತ್ತದೆ.

**ಮುಕ್ತಾಯವಾದದ್ದು ಏನು?**

"ಇಬ್ಬರೂ ಸತ್ತರು" ಅಥವಾ ಯೆಹೂದ್ಯರ ದಯೆಯ ಕಾಲವು – ಯೆಹೂದ್ಯರ ಯುಗವು ಮುಕ್ತಾಯವಾಯಿತು.

ಅದೇ ರೀತಿ ಸುವಾರ್ತೆಯುಗ ಆರಂಭವಾದಾಗಿನಿಂದ ಯೆಹೂದ್ಯರಲ್ಲದವರಿಗೆ ದಯೆಯಿಲ್ಲದ ಕಾಲವು ಮುಕ್ತಾಯವಾಯಿತು.

**"ಲಾಜರನು"**

ಇದು ಯೆಹೂದ್ಯರಲ್ಲದವರು ಸುವಾರ್ತೆಯನ್ನು ಅಂಗೀಕರಿಸಿಕೊಂಡು ಕ್ರೈಸ್ತರಾದವರನ್ನು ಸೂಚಿಸುತ್ತದೆ.

**"ದೇವದೂತರು ಅವನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು"**

**ಏನಿದು ಮತ್ತು ಇದರ ಅರ್ಥವೇನು?**

ಕೆಳಗಿನ ವಾಕ್ಯವನ್ನು ಓದಿ, ಅರ್ಥಮಾಡಿಕೊಳ್ಳೋಣ.

## "ದೇವದೂತರು"

ಇದು ಆದಿ ಸಭೆಯ ಸುವಾರ್ತಾ ಸಂದೇಶಕರನ್ನು ಸೂಚಿಸುತ್ತದೆ. ಮುಖ್ಯವಾಗಿ ಅಪೋ. ಪೇತ್ರನು ಕೊರ್ನೇಲ್ಯನ ಮನೆಯಲ್ಲಿ "ಯೆಹೂದ್ಯರಲ್ಲದವರಿಗೆ ಸುವಾರ್ತೆಯ ಬಾಗಿಲನ್ನು ತೆರೆಯುತ್ತಾನೆ." ಮತ್ತು ಅಪೋ.ಪೌಲನು ಯೆಹೂದ್ಯರಲ್ಲದವರಿಗಾಗಿ ಸುವಾರ್ತೆಯನ್ನೂ ಸಾರುವುದಕ್ಕೆ ವಿಶೇಷವಾಗಿ ಅರಿಸಲ್ಪಟ್ಟವನು. (ಗಲಾತ್ಯ 2:8)

ಮತ್ತು ಅವರ ಜೊತೆಗಾರರಾದ ಬಾರ್ನಬ, ತೀತನು, ಸೀಲನು, ಲೂಕ ಇತರರು.



## "ಅಬ್ರಹಾಮನ ಎದೆಗೆ"

ಇದು "ಅಬ್ರಹಾಮನ ಮಕ್ಕಳಾಗುವುದೆಂದು" **ಗಲಾತ್ಯ** 3:7 ರಲ್ಲಿ ಓದುತ್ತೇವೆ ಮತ್ತು "**ಅಬ್ರಹಾಮನ ವಾಗ್ದಾನಗಳಿಗೆ ಬಾಧ್ಯರೂ**" – ಅದು ಕ್ರಿಸ್ತನೇ (**ಗಲಾತ್ಯ** 3:16,29)

**ಹೌದು! ಕ್ರಿಸ್ತನ ಶರೀರದ ಅಂಗವಾಗುವುದಕ್ಕೆ ಯೆಹೂದ್ಯರಲ್ಲದವರಿಗೆ ಇರುವ ಸುವರ್ಣವಕಾಶದ ಚಿತ್ರವನ್ನು ಇಲ್ಲಿ ಕೊಡಲಾಗಿದೆ.**

"**ಐಶ್ವ0ರ್ಯವಂತ**"ನ ಬಗ್ಗೆ ಏನು ಓದುತ್ತೇವೆ?

ನಾವು ಹೀಗೆ ಓದುತ್ತೇವೆ –"**ಆ ಐಶ್ವರ್ಯವಂತನು ಸಹ ಸತ್ತನು ಅವನಿಗೆ ಉತ್ತರ ಕ್ರಿಯೆಗಳು ಆದವು.**"

ಇದು ಇಸ್ರಾಯೇಲ್ ದಯೆಯ ಕಾಲವಾದ ಯೆಹೂದ್ಯರ ಯುಗವು ಹೇಗೆ ಮುಕ್ತಾಯಗೊಂಡಿತು ಎಂಬುದನ್ನು ಸೂಚಿಸುತ್ತದೆ
ಮತ್ತು ಅದರ "ಉತ್ತರ ಕ್ರಿಯೆಗಳು" ನಡೆದವು ಅಂದರೆ ಪೂರ್ತಿಯಾಗಿ ಕಣ್ಮರೆಯಾಗಿ ಕ್ರಿ. ಶ. 70ರ ನಂತರ ಆ ದೇಶವು ಇಲ್ಲದೆ ಹೋಯಿತು.

ಮತ್ತು ಇದರ ನಂತರ ಹೀಗೆ ಓದುತ್ತೇವೆ.

**ಲೂಕ 16:23,24**

"**ಅವನು ಪಾತಾಳದೊಳಗೆ ಯಾತನೆಪಡುತ್ತಾ ಇರುವಲ್ಲಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಇವನ ಎದೆಗೆ ಒರಗಿಕೊಂಡಿದ್ದ ಲಾಜರನನ್ನೂ ನೋಡಿ - ತಂದೆಯೇ, ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ಸಂಕಟಪಡುತ್ತೇನೆ ಎಂದು ಕೂಗಿ ಹೇಳಿದನು**"



## ಇದರ ಅರ್ಥವೇನು?

ಇದು ಇಸ್ರಾಯೇಲ್ ದೇಶ ಮತ್ತು ಕ್ರಿ. ಶ.70ರ ನಂತರ ಅದರ ಸ್ಥಿತಿ ಹೇಗಿತ್ತೆಂದು ಸೂಚಿಸುತ್ತದೆ ಮತ್ತು ಹೇಗೆ ಇಸ್ರಾಯೇಲ್ ದೇಶದವರು ಲೋಕದಲ್ಲೆಲ್ಲಾ ಚದುರಿಹೋದರು ಎಂಬುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.


### ಜೆಕರ್ಯ 7:13,14

**"ಆಗ ಸೇನಾಧೀಶ್ವರ ಯೆಹೋವನು ಇಂತೆಂದನು - ನಾನು ಕೂಗಿದರೂ ಅವರು ಹೇಗೆ ಕೇಳಲಿಲ್ಲವೋ ಹಾಗೆ ಅವರು ಕೂಗಿದರೂ ನಾನು ಕೇಳುವದಿಲ್ಲ; ಅವರು ನೋಡದ ಎಲ್ಲಾ ಜನಾಂಗಗಳ ಮಧ್ಯಕ್ಕೆ ಅವರನ್ನು ತೂರಿಬಿಡುವೆನು. ಯೆಹೋವನ ಈ ಮಾತಿನಂತೆ ಅವರು ಚದರಿದ ಮೇಲೆ ದೇಶವು ಹಾಳಾಯಿತು, ಅದರಲ್ಲಿ ಯಾರೂ ಹೋಗುತ್ತಿರಲಿಲ್ಲ, ಬರುತ್ತಿರಲಿಲ್ಲ; ಆ ರಮ್ಯದೇಶವನ್ನು ಹಾಳುಗತಿಗೆ ತಂದರಷ್ಟೆ."**

ಹೌದು! ಇದು ಅವರು ಪಡುತ್ತಿರುವ ವೇದನೆಗಳು ಮತ್ತು ಮಾನವನ ಹಕ್ಕುಗಳೂ ಸಹ ತಿರಸ್ಕರಿಸಲ್ಪಟ್ಟ ಸ್ಥಿತಿಯ ಚಿತ್ರವನ್ನು ಸೂಚಿಸುತ್ತದೆ.

### "ಉರಿಯಲ್ಲಿ ಸಂಕಟ ಪಡುತ್ತೇನೆ"

ಇಲ್ಲಿ ಉರಿ ಎಂಬ ಬೆಂಕಿಯು ಇಸ್ರಾಯೇಲ್ ದೇಶದ ಮೇಲೆ ಬಂದ ನ್ಯಾಯ ತೀರ್ಪಿಗೆ ಸಾಂಕೇತಿಕವಾಗಿದೆ. ಇದರ ಬಗ್ಗೆ ಯೇಸು ನುಡಿದ ವಾಕ್ಯವನ್ನು ಕೆಳಗೆ ಓದುತ್ತೇವೆ –



### ಮತ್ತಾಯ 23:38

**" ನೋಡಿರಿ, ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ."**

ಈ ಮಾತುಗಳು ಆತನನ್ನು ಶಿಲುಬೆಗೆ ಹಾಕಲ್ಪಟ್ಟ ವರ್ಷದಲ್ಲಿ ಅಂದರೆ ಕ್ರಿ.ಶ.33 ರಲ್ಲಿ ನುಡಿದನು. ಮತ್ತು ಇಸ್ರಾಯೇಲ್ ಜನರೇ ಕೇಳಿಕೊಂಡಂತೆ ಅವರ ಮೇಲೆ ನ್ಯಾಯತೀರ್ಪು ನೆರವೇರಿತು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

### ಮತ್ತಾಯ 27:25

**"ಜನರೆಲ್ಲಾ - ಅವನನ್ನು ಕೊಲ್ಲಿಸಿದ್ದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ ಅಂದರು."**

ಕ್ರಿ. ಶ. 70 ರಿಂದ ಸುವಾರ್ತೆಯ ಯುಗದವರೆಗೂ ಇಸ್ರಾಯೇಲ್ಯರ ಮೇಲೆ ಬಂದ ನ್ಯಾಯತೀರ್ಪು ಮತ್ತು ಅವರು ಅನುಭವಿಸಿದ ವೇದನೆಗಳನ್ನು ಬೆಂಕಿಗೆ ಸಾಂಕೇತಿಸಲಾಗಿದೆ. ಏಕೆಂದರೆ ಬೆಂಕಿಯು ದೇವರ ನ್ಯಾಯತೀರ್ಪಿಗೆ ಸಂಕೇತವಾಗಿದೆ.

**(ಯೆಶಾಯ 66:15,16 ಓದಿರಿ)**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲೂ ಸಹ ಓದುತ್ತೇವೆ.

**ಚೆಫನ್ಯ 3:8**

**“.....ಜನಾಂಗರಾಜ್ಯಗಳ ಮೇಲೆ ನನ್ನ ರೌದ್ರವನ್ನು, ಹೌದು, ನನ್ನ ಉಗ್ರಕೋಪವನ್ನೆಲ್ಲಾ ಹೊಯ್ದು ಬಿಡುವದಕ್ಕಾಗಿ ಆ ಜನಾಂಗಗಳನ್ನು ಸೇರಿಸಿ ಆ ರಾಜ್ಯಗಳನ್ನು ಕೂಡಿಸಬೇಕೆಂದು ತೀರ್ಮಾನಿಸಿಕೊಂಡಿದ್ದೇನೆ; ”**

**“ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನು ...... ನೋಡಿ”**

ಇದು ಇಸ್ರಾಯೇಲ್ಯರಿಗೆ ದೇವರ ದಯೆಯಿಲ್ಲವೆಂಬ ವಿಷಯವು ಮನವರಿಕೆಯಾಗುವುದನ್ನು ಸೂಚಿಸುತ್ತದೆ. ಇಲ್ಲಿ ಅಬ್ರಹಾಮನು ತಂದೆಯಾದ ದೇವರಿಗೆ ಚಿತ್ರಣವಾಗಿದ್ದಾನೆ.

**(ಇಸಾಕನನ್ನು ಬಲಿಕೊಡುವುದಕ್ಕೆ ಹೋಗುವುದು ದೇವರು ತನ್ನ ಒಬ್ಬನೇ ಮಗನನ್ನು ಲೋಕದ ಪಾಪಗಳಿಗಾಗಿ ಅರ್ಪಿಸುವುದಕ್ಕೆ ಸೂಚಕವಾಗಿದೆ)**

**“ಎದೆಗೆ ಒರಗಿಕೊಂಡಿದ್ದ ಲಾಜರನನ್ನು”**

ಇದು ಸುವಾರ್ತಾ ಯುಗದ ಯೆಹೂದ್ಯರಲ್ಲದ ದೇಶಗಳ, ಕ್ರೈಸ್ತರ ಆಶೀರ್ವಾದದ ಸ್ಥಿತಿಯನ್ನು ಸೂಚಿಸುತ್ತದೆ

**“ಲಾಜರನನ್ನು ಕಳುಹಿಸಿ; ಅವನು ತನ್ನ ತುದಿ ಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ”**

ಇದು ಕ್ರೈಸ್ತದೇಶಗಳಲ್ಲಿ ವಾಸವಾಗಿರುವ ಯೆಹೂದ್ಯರು ದೇವರ ಬಳಿ ದಯೆ ತೋರುವಂತೆ ಪ್ರಾರ್ಥಿಸುವುದನ್ನು ಸೂಚಿಸುತ್ತದೆ.

ಉದಾ: ಶಾಲೆಗಳು, ಯೆಹೂದ್ಯರ ಆರಾಧನಾ ಸ್ಥಾನಗಳನ್ನು ಕಟ್ಟುವುದು ಮತ್ತು ವಸತಿ ಸ್ಥಾಪನೆ ಇತ್ಯಾದಿ...

ಆದರೆ ದೇವರ ಪ್ರತಿಕ್ರಿಯೆ ಏನೆಂದು ಓದುತ್ತೇವೆ? ಕೆಳಗಿನ ವಾಕ್ಯದಲ್ಲಿ ಓದೋಣ:–

**ಲೂಕ 16:25**

**“ ಆದರೆ ಅಬ್ರಹಾಮನು - ಕಂದಾ, ನೀನು ಆಶಿಸಿದ ಸುಖವನ್ನು ನಿನ್ನ ಜೀವಮಾನದಲ್ಲಿ ಹೊಂದಿದಿ; ಹಾಗೆಯೇ ಲಾಜರನು ಕಷ್ಟವನ್ನು ಹೊಂದಿದನು ಎಂಬದನ್ನು ನೆನಪಿಗೆ ತಂದುಕೋ. ಈಗಲಾದರೋ ಇಲ್ಲಿ ಇವನಿಗೆ ಸಮಾಧಾನ, ಆದರೆ ನಿನಗೆ ಸಂಕಟ.”**

**ಹೌದು! ಇದು ದೇವರು ತಾನೇ ಮಾತಾಡುವ ಚಿತ್ರವಾಗಿದೆ!**

**ದೇವರು ಹೇಗೆ ಮಾತಾಡುತ್ತಾನೆ? ಆತನ ವಾಕ್ಯದ ಮೂಲಕ!**

ಇದಕ್ಕೆ ದೇವರ "ಉತ್ತರ” ವನ್ನು ಆತನ ವಾಕ್ಯದ ಮೂಲಕ "ದೇವರ ದೈವೀಕ ಯೋಜನೆ” ಯಲ್ಲಿ ಪ್ರಕಟಿಸಿದ್ದಾನೆ!

**ಯೆಹೂದ್ಯರ ಯುಗ**

**ಯೆಹೂದ್ಯರಿಗೆ ಆಶೀರ್ವಾದ(ದಯೆಯ ಕಾಲ)**

**ಅನ್ಯರಿಗೆ ವೇದನೆ ( ದಯೆ ಇಲ್ಲದ ) ಕಾಲ.**

**ಸುವಾರ್ತಾ ಯುಗ**

**"ನಂಬುವ" ಅನ್ಯಜನರಿಗೆ ಆಶೀರ್ವಾದ**

**ಕುರುಡರಾಗಿರುವ ಯೆಹೂದ್ಯರಿಗೆ ವೇದನೆ.**

ನಂತರ ನಾವು ಹೀಗೆ ಓದುತ್ತೇವೆ –

**ಲೂಕ 16:26**

**“ ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ; ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು; ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವದಕ್ಕಾಗದು ಅಂದನು.”**

**ಇವುಗಳ ಅರ್ಥವೇನು?**

ಇದನ್ನು ಮತ್ತೆ ದೇವರ ವಾಕ್ಯದಲ್ಲಿ ಕೊಡಲಾಗಿದೆ!!

ಇದು ಯೆಹೂದ್ಯ ಧರ್ಮ ಮತ್ತು ಕ್ರೈಸ್ತ ಧರ್ಮದ ಬೇರ್ಪಡುವಿಕೆಯನ್ನು ಸೂಚಿಸುತ್ತದೆ.

– ಯೆಹೂದ್ಯರು! ಮತ್ತು ಕ್ರೈಸ್ತರು!

## “ದೊಡ್ಡ ಡೊಂಗರ ಸ್ಥಾಪಿಸಿಯದೆ”

ಇದು **ತಡೆ** ಅಥವಾ **ಅಡ್ಡವನ್ನು** ಸೂಚಿಸುತ್ತದೆ.

### ಇದರ ಅರ್ಥವೇನು?

ಇದು ಯೇಸುವನ್ನು ನಂಬಲಾಗದ ಮತ್ತು ಅಂಗೀಕರಿಸಲಾಗದ ಯೆಹೂದ್ಯರ ಅಪನಂಬಿಕೆಯನ್ನು ಸೂಚಿಸುತ್ತದೆ.



ಆದ್ದರಿಂದ ಅವರು 0ಯೇಸುವನ್ನು ಅಂಗೀಕರಿಸಿಕೊಂಡು ಆಶೀರ್ವಾದದ ಮತ್ತೊಂದು ಕಡೆ ಬರಲು ಸಾಧ್ಯವಾಗಲಿಲ್ಲ.

**“ಆದಕಾರಣ ಈ (ಅಬ್ರಹಾಮನ) ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು”**

ಇದು ಕ್ರೈಸ್ತ ಬೋಧನೆಯ ಮೂಲಕ ಇಸ್ರಾಯೇಲ್ ದೇಶವನ್ನು ಧರ್ಮಶಾಸ್ತ್ರದ ಬಂಧನದಿಂದ ಬಿಡಿಸುವುದು ಅಸಾಧ್ಯವೆಂಬುದನ್ನು ಸೂಚಿಸುತ್ತದೆ.

**ಉದಾ:– ಗಲಾತ್ಯ 3:1 –“ಎಲೈ ಬುದ್ಧಿಯಿಲ್ಲದ ಗಲಾತ್ಯದವರೇ, ಯಾರು ನಿಮ್ಮನ್ನು ಮರುಳುಗೊಳಿಸಿದರು? ಯೇಸು ಕ್ರಿಸ್ತನು ಶಿಲುಬೆಗೆ ಹಾಕಿಸಿಕೊಂಡವನಾಗಿ ನಿಮ್ಮ ಕಣ್ಣೆದುರಿನಲ್ಲಿ ವರ್ಣಿಸಲ್ಪಟ್ಟನಲ್ಲವೇ.”**

**“ಮತ್ತು ಆ (ಐಶ್ವರ್ಯವಂತನ) ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವುದಕ್ಕಾಗದು”**

ಇದು ಯೆಹೂದ್ಯರು ಬೇರೆ ಯುಗದವರಾಗಿದ್ದು ಮೋಶೆಯನ್ನು, ಆತನ ಕಟ್ಟಳೆಯನ್ನು ಹಿಂಬಾಲಿಸುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಮತ್ತು ಯೇಸುವನ್ನು ನಿರಾಕರಿಸಿದರು, ಮತ್ತು ಆತನನ್ನು ಗುರುತು ಸಹ ಹಿಡಿಯಲಿಲ್ಲ ಎಂದು ಯೋಹಾನ 9:28,29ರಲ್ಲಿ ಓದುತ್ತೇವೆ.

**ಯೋಹಾನ 9:28,29**

**“ ನಾವು ಮೋಶೆಯ ಶಿಷ್ಯರು; ಮೋಶೆಯ ಸಂಗಡ ದೇವರು ಮಾತಾಡಿದನೆಂದು ನಾವು ಬಲ್ಲೆವು; ಆದರೆ ಇವನು ಎಲ್ಲಿಯವನೋ ಅರಿಯೆವು ಅಂದರು...”**

## ಹೌದು! ನಿಜವಾಗಿಯೂ ಅಗಾಧವಾದ ಕಂದರ ಇತ್ತು!!

ಈಗ ಕೆಳಗಿನ ವಾಕ್ಯವನ್ನು ಓದೋಣ –

**ಲೂಕ 16:27-31**

**“ಆಗ ಅವನು - ಅಪ್ಪಾ, ಹಾಗಾದರೆ ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ನನಗೆ ಐದು ಮಂದಿ ಅಣ್ಣತಮ್ಮಂದಿರಿದ್ದಾರೆ; ಅವರು ಸಹ ಈ ಯಾತನೆಯ ಸ್ಥಳಕ್ಕೆ ಬಂದಾರು; ಬಾರದಂತೆ ಅವನು ತಾನು ಕಂಡದ್ದನ್ನು ಅವರಿಗೆ ಚೆನ್ನಾಗಿ ಹೇಳಲಿ ಅಂದನು. ಆದರೆ ಅಬ್ರಹಾಮನು - ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ ಅವರಲ್ಲಿ ಅವೆ; ಅವುಗಳನ್ನು ಕೇಳಲಿ ಅನ್ನಲು ಅವನು - ತಂದೆಯೇ, ಅಬ್ರಹಾಮನೇ, ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ದೇವರ ಕಡೆಗೆ ತಿರುಗಿಕೊಳ್ಳುವರು ಅಂದನು. ಅಬ್ರಹಾಮನು ಅವನಿಗೆ -**

**ಅವರು ಮೋಶೆಯ ಮಾತನ್ನೂ ಪ್ರವಾದಿಗಳ ಮಾತನ್ನೂ ಕೇಳದಿದ್ದರೆ ಸತ್ತು ಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಅವರು ಒಪ್ಪುವದಿಲ್ಲ ಎಂದು ಹೇಳಿದನು."**

ಹೌದು! ಇದು ಅಸಹಾಯಕತೆಯ ಚಿತ್ರಣವಾಗಿದೆ. ಮತ್ತು ಸುವಾರ್ತಾ ಯುಗದಲ್ಲಿ ಇಸ್ರಾಯೇಲ್ ದೇಶದ ಅಸಹಾಯಕತೆಯ ಸ್ಥಿತಿಯನ್ನು ಸೂಚಿಸುತ್ತದೆ.

## "ಐದು ಮಂದಿ ಅಣ್ಣ ತಮ್ಮಂದಿರಿದ್ದಾರೆ"

ಇವರು ಇಸ್ರಾಯೇಲ್ ದೇಶದ "ಹತ್ತು ಕುಲಗಳನ್ನು" ಸೂಚಿಸುತ್ತಾರೆ ಮತ್ತು "ಐಶ್ವರ್ಯವಂತನು" ಯೆಹೂದ ದೇಶದ "ಎರಡು ಕುಲಗಳನ್ನು" ಸೂಚಿಸುತ್ತಾನೆ.

ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ.


### 2 ಪೂರ್ವಕಾಲ ವೃತ್ತಾಂತ 11:1-4

**" ರೆಹಬ್ಬಾಮನು ಯೆರೂಸಲೇಮನ್ನು ಮುಟ್ಟಿದ ನಂತರ ಇಸ್ರಾಯೇಲ್ಯರಿಗೆ ವಿರೋಧವಾಗಿ ಯುದ್ಧ ಮಾಡುವದಕ್ಕೂ ರಾಜ್ಯವನ್ನು ತಿರಿಗಿ ತನ್ನ ವಶಪಡಿಸಿ ಕೊಳ್ಳುವದಕ್ಕೂ ಯೆಹೂದ ಬೆನ್ಯಾಮಿನ್ ಕುಲಗಳಿಂದ ಲಕ್ಷದ ಎಂಭತ್ತು ಸಾವಿರ ಮಂದಿ ಶ್ರೇಷ್ಠಸೈನಿಕರನ್ನು ಕೂಡಿಸಿದನು. ಆಗ ದೇವರ ಮನುಷ್ಯನಾದ ಶೆಮಾಯನಿಗೆ - ನೀನು ಹೋಗಿ ಸೊಲೊಮೋನನ ಮಗನೂ ಯೆಹೂದದ ಅರಸನೂ ಆದ ರೆಹಬ್ಬಾಮನಿಗೂ ಯೆಹೂದ ಬೆನ್ಯಾಮಿನ್ ಕುಲಗಳ ಇಸ್ರಾಯೇಲ್ಯರೆಲ್ಲರಿಗೂ - ಯೆಹೋವನು ಇಂತೆನ್ನುತ್ತಾನೆ, ನೀವು ನಿಮ್ಮ ಸಹೋದರರೊಡನೆ ಯುದ್ಧ ಮಾಡುವದಕ್ಕೆ ಹೋಗಬಾರದು. ಎಲ್ಲರೂ ಹಿಂದಿರುಗಿ ಹೋಗಿರಿ; ಈ ಕಾರ್ಯವು ಯೆಹೋವನಿಂದಾಗಿದೆ ಎಂದು ಹೇಳಬೇಕು ಎಂಬ ಯೇಹೋವನ ವಾಕ್ಯವುಂಟಾಗಲು ಅವರು ಯೆಹೋವನ ಮಾತನ್ನು ಕೇಳಿ ಯಾರೊಬ್ಬಾಮನಿಗೆ ವಿರೋಧವಾಗಿ ಹೊರಡದೆ ಹಿಂದಿರುಗಿ ಹೋದರು."**

ಹೌದು! ರಾಜನಾದ ಸೋಲೋಮೋನನ ಮರಣದ ನಂತರ 12 ಕುಲಗಳ ಇಸ್ರಾಯೇಲ್ ದೇಶವು 2 ಭಾಗಗಳಾದವು ಯೆಹೂದ ಮತ್ತು ಬೆನ್ಯಾಮೀನ್ ಕುಲಗಳು ಯೆಹೂದ ದೇಶವಾದವು. ಮತ್ತು ಉಳಿದ 10 ಕುಲಗಳನ್ನು ಇಸ್ರಾಯೇಲ್ ದೇಶವೆಂದು ಕರೆಯಲಾಗಿದೆ. ಈಗ "ಐಶ್ವರ್ಯವಂತನು" 2 ಕುಲಗಳ ಯೆಹೂದ ದೇಶವನ್ನು ಸೂಚಿಸುವುದಾದರೆ, "ಐದು ಮಂದಿ ಅಣ್ಣತಮ್ಮಂದಿರು"10 ಕುಲಗಳ ಇಸ್ರಾಯೇಲ್ ದೇಶವನ್ನು ಸೂಚಿಸಬೇಕು!!

## "ಮೋಶೆ ಮತ್ತು ಪ್ರವಾದಿಗಳು"

ಇದು ಹಳೇ ಒಡಂಬಡಿಕೆ ಮತ್ತು ಮೆಸ್ಸೀಯನ ಸಾಕ್ಷಿಗಳನ್ನು ಸೂಚಿಸುತ್ತದೆ.



ಮತ್ತು ಮೆಸ್ಸೀಯನು ಮಹಿಮೆ ಮತ್ತು ರಾಜ್ಯವನ್ನು ಹೊಂದುವುದಕ್ಕೆ ಮೊದಲು ಹೇಗೆ ಕಷ್ಟಾನುಭವಗಳನ್ನು ಪಟ್ಟು ಸಾಯುವನೆಂದು **ಯೆಶಾಯ 53ನೇ ಅಧ್ಯಾಯ** ಮತ್ತು **ಕೀರ್ತನೆ 22 ನೇ ಅಧ್ಯಾಯ,** ಇತರೆಗಳಲ್ಲಿ ದಾಖಲಾಗಿದೆ.

ಹೌದು! ಯೆಹೂದ್ಯರು ತಮ್ಮ ಮೆಸ್ಸೀಯನ ಈ ಅಂಶವನ್ನು ಗ್ರಹಿಸಲಿಲ್ಲ ಮತ್ತು ಯೇಸುವನ್ನು ಗುರುತು ಹಿಡಿಯಲಿಲ್ಲ!

## "ಸತ್ತು ಹೋಗಿದ್ದವನೊಬ್ಬನೂ ಜೀವಿತನಾಗಿ ಎದ್ದು"

ಇದು ಯೇಸುವನ್ನು ಸೂಚಿಸುವುದಿಲ್ಲ! ನೆನೆಪಿಡಿರಿ, ಇದು ಸಾಂಕೇತಿಕ ಮತ್ತು ಸಾಮ್ಯರೂಪ ಭಾಷೆಯಾಗಿದೆ, ಮತ್ತು ನೇರವಾದ ಭಾಷೆ ಅಲ್ಲ.

**ಹಾಗಾದರೆ ಒಬ್ಬನು ಸತ್ತು ಮತ್ತೆ ಜೀವಂತ ಹೊಂದಿದವನೆಂದು ಯಾರನ್ನು ಸೂಚಿಸುತ್ತದೆ?**

ಇದಕ್ಕೆ ಉತ್ತರವನ್ನು ಹೀಗೆ ನೋಡುತ್ತೇವೆ –

**ಎಫೆಸದವರಿಗೆ 2:1**

**"ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು."**

ಹೌದು! ಲೋಕದ ಪಾಪದ "**ಸತ್ತ**" ಸ್ಥಿತಿಯಿಂದ "**ಬದುಕಿ**" ಬಂದ ಕ್ರೈಸ್ತರು ಮತ್ತು ಯೆಹೂದ್ಯರಲ್ಲದ ಕ್ರೈಸ್ತರನ್ನು ಸೂಚಿಸುತ್ತದೆ. (**ಲೂಕ 9:60** ರಲ್ಲಿಯೂ ನೋಡುತ್ತೇವೆ)

ಆದ್ದರಿಂದ ಕ್ರೈಸ್ತರು ಸುವಾರ್ತೆಗಳನ್ನು ಸಾರುವುದರ ಪ್ರಯತ್ನದಿಂದ **ಇಸ್ರಾಯೇಲ್ ದೇಶವನ್ನು ರಕ್ಷಿಸಲಾಗದು**

## ಹಾಗಾದರೆ ಇಸ್ರಾಯೇಲಿನ ಗತಿಯೇನು ???

ಇದಕ್ಕೆ ಉತ್ತರವನ್ನು ಹೀಗೆ ಓದುತ್ತೇವೆ –

**ರೋಮಾ 11:25,26**

**"......ಅದೇನಂದರೆ ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡತನವು ಯಾವಾಗಲೂ ಇರದೆ ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವದು; ಆ ಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆಹೊಂದುವದು."**

ಹೌದು! **ಇಸ್ರಾಯೇಲ್ ಜನರೆಲ್ಲಾ "ರಕ್ಷಣೆ ಹೊಂದುವರು"** ಎಂದು ಓದುತ್ತೇವೆ !!

ದೇವರ ಯೋಜನೆಯಲ್ಲಿ ಎರಡು ರಕ್ಷಣೆಗಳಿವೆ. ಸಭೆಯು ರಕ್ಷಣೆ ಹೊಂದಿದ ನಂತರ ಇಸ್ರಾಯೇಲ್ಯರ ರಕ್ಷಣೆ ಉಂಟಾಗುವುದು

ಸಭೆಯು ಪೂರ್ಣವಾದ ನಂತರ ಇಸ್ರಾಯೇಲ್ಯರ ಅಪನಂಬಿಕೆ ಮತ್ತು ಕುರುಡುತನಗಳು ತೆಗೆಯಲ್ಪಡುವವು!!

## ಆದ್ದರಿಂದ ಈ ಸಾಮ್ಯರೂಪವು ಎರಡು ವರ್ಗಗಳನ್ನು ಮತ್ತು ಎರಡು ಯುಗಗಳಲ್ಲಿನ ಅದರ ಸ್ಥಿತಿಯನ್ನು ಸೂಚಿಸುತ್ತದೆ


ಯೇಸು ಈ ವಾಕ್ಯಗಳನ್ನು ಹೇಳುವಾಗ ಆ ಎರಡು ಯುಗಗಳ ಮಧ್ಯದಲ್ಲಿದ್ದನು – ಯೆಹೂದ್ಯರ ಯುಗದ ಮುಕ್ತಾಯದಲ್ಲಿ ಮತ್ತು ಸುವಾರ್ತಾ ಯುಗದ ಆರಂಭದಲ್ಲಿ


## ಹೌದು! ಇದು ಎರಡು ಯುಗಗಳ ಸುದ್ದಿ!!

ಸಹೋದರ / ಸಹೋದರಿಯರೇ, ಮಾನವನ ಆತ್ಮದ ಬಗ್ಗೆ ಇಲ್ಲಿ ಯಾವ ಸೂಚನೆಯೂ ಇಲ್ಲವೆಂದು ನೀವು ಗಮನಿಸಿದಿರಾ!!

ಮುಂದಿನ ತರಗತಿಯಲ್ಲಿ ನರಕದ ಸತ್ಯವನ್ನು ಕುರಿತು ಅಭ್ಯಾಸ ಮಾಡೋಣ !!

**"ಆಮೆನ್"**






For Private Circulation Only

NOT FOR SALE

**Jesus Loves** *Ministry*

For free indepth Bible study contact

Br.Raju 8867768876

# 1, BETHESDA, 1st floor, Janani Enclave, 1st cross,
Thiglarapalya Andrahalli Main Rd, B'lore 560058

Email : rajudawn@yahoo.com

YouTube SUBSCRIBE TO OUR CHANNEL

Available Languages : Kannada, English, Hindi, Tamil and Telugu